# ಅಲಿಯಾ ಹೊರ ನಡಿಗೆ!



ಬಾಲಿವುಡ್ ಚೆಂದುಳ್ಳಿ ಚೆಲುವೆ ಅಲಿಯಾ ಭಟ್‌ಗೆ ಹೊರ ನಡೆಯುವ ಬಯಕೆ! ಇತ್ತೀಚೆಗೆ ತನ್ನ ಮನೆಯಿಂದ ಹೊರ ನಡೆಯುವ ಮಾತನಾಡಿದ್ದ ಅಲಿಯಾ, ಈಗ ಸಿನಿಮಾವೊಂದರಿಂದಲೂ ಹೊರನಡೆದಿದ್ದಾರೆ. ಅಂದಹಾಗೆ ಹೋಮಿ ಅದ್ಜನಿಯಾರ 'ರಾಬತ್' ಸಿನಿಮಾದಲ್ಲಿ ಸುಶಾಂತ್‌ಸಿಂಗ್ ರಜಪೂತ್ ಜತೆ ಅಲಿಯಾ ಆಹ್ಲಾದದ ಹೆಜ್ಜೆಯೂರಬೇಕಿತ್ತು. ಆದರೆ ಈಗಾಗಲೇ 'ಶಾಂದಾರ್', 'ಉಡ್ತಾ ಪಂಜಾಬ್', 'ಕಪೂರ್ ಅಂಡ್ ಸನ್ಸ್' ಮತ್ತಿತರ ಪ್ರೇಮಕಥೆಗಳ ಚಿತ್ರಗಳಲ್ಲಿ ಪ್ರೀತಿಯ ರಸಾಯನ ಸವಿದಿರುವ ಕಾರಣ ಸದ್ಯಕ್ಕೆ ಈ ರೀತಿಯ ಚಿತ್ರಗಳಿಂದ ಆಕೆ ಒಂದಿಷ್ಟು ದಿನಗಳು ದೂರವುಳಿಯಲು ನಿರ್ಧರಿಸಿದ್ದಾಳೆ. ಈ ಏಕತಾನತೆಯ ಗುಮ್ಮವೇ 'ರಾಬತ್'ನಿಂದ ಕಾಲು ಹೊರಗಿರಿಸಲು ಕಾರಣವಂತೆ!

ಹೋಮಿ ಅದ್ಜನಿಯಾ ಮಾರ್ಚ್‌ನಲ್ಲಿ ಚಿತ್ರಕಥೆ ಪೂರ್ಣಗೊಳಿಸಿದ್ದು, ಮೇನಲ್ಲಿ ಚಿತ್ರೀಕರಣದ ಯೋಜನೆ ಹಾಕಿಕೊಂಡಿದ್ದರು. ಅಲಿಯಾ ಚಿತ್ರತಂಡ ತೊರೆದಿರುವುದರಿಂದ 'ರಾಬತ್' ನಾಲ್ಕು ತಿಂಗಳು ಮುಂದೆ ಹೋಗುವ ಸಾಧ್ಯತೆ ಇದೆ. ಅಷ್ಟಕ್ಕೂ ಅಲಿಯಾಳನ್ನು ಮನಸ್ಸಿನಲ್ಲಿಟ್ಟುಕೊಂಡೇ ಚಿತ್ರಕತೆ ಹೆಣೆದಿರುವುದರಿಂದ ಆ ಪಾತ್ರಕ್ಕೆ ಹೊಂದುವವರನ್ನು ಹೊಸದಾಗಿ ಹುಡುಕಬೇಕಿದೆ. 2016ಕ್ಕೆ ಸಿನಿಮಾ ತೆರೆಗೆ ಬರಬೇಕಿರುವುದರಿಂದ ಬೇರೊಬ್ಬ ನಟಿಯನ್ನು ಹುಡುಕುವುದು ಅನಿವಾರ್ಯ ಎಂದು ಹೇಳಿಕೊಂಡಿದ್ದಾರೆ ಹೋಮಿ.

23 ವರ್ಷದ ಅಲಿಯಾ ಮನೆ ತೊರೆವ ನಿರ್ಧಾರದ ಬಗ್ಗೆಯೂ ಮನಬಿಚ್ಚಿದ್ದಾಳೆ. ಹುಬ್ಬೇರಿಸಬೇಡಿ, ಇದು ಯಾವುದೇ ಡೇಟಿಂಗ್ ವಿಷಯವಲ್ಲ! –'ಇದು ನನಗೆ ಹೊಸದು. 23 ವರ್ಷಗಳಿಂದ ಕುಟುಂಬದ ಜತೆ ವಾಸಿಸಿದ್ದೇನೆ. ಸ್ವಂತದ್ದಾಗಿ ಏನಾದರೂ ಖರೀದಿಸಬೇಕು ಅನಿಸಿದ್ದಕ್ಕೆ ಫ್ಲಾಟ್ ಖರೀದಿಸಿದ್ದೇನೆ. ಇದು ನಮ್ಮ ಮನೆ ಸಮೀಪವೇ' ಎಂದಿದ್ದಾಳೆ ಅಲಿಯಾ. ಈ ನಿರ್ಧಾರಕ್ಕೆ ಕೊಂಚ ಬೇಸರಗೊಂಡಿದ್ದಾರಂತೆ ಆಕೆಯ ತಂದೆ ಮಹೇಶ್ ಭಟ್. 'ನೀನು ಏಕೆ ಬಿಟ್ಟುಹೋಗಬೇಕು? ಇದೇ ಮನೆಯಲ್ಲಿ ನಿನಗೆ ಖಾಸಗಿತನ ಸಿಗುತ್ತಿರಬೇಕಾದರೆ ಬೇರೆ ಮನೆ ಅವಶ್ಯಕತೆ ಏನಿದೆ?' ಎಂದು ಪ್ರಶ್ನಿಸಿದ್ದಾರಂತೆ. ಕೊನೆಗೂ ಮುದ್ದಿನ ಪಪ್ಪನಿಗೆ ಪಪ್ಪಿಕೊಟ್ಟು ಒಪ್ಪಿಸಿದ್ದಾರಂತೆ. 'ಆದರೆ ಆ ಮನೆಯಲ್ಲಿ ನನಗೆ ಪ್ರತ್ಯೇಕ ಕೋಣೆ ಮೀಸಲಿಡಬೇಕು' ಎಂದು ಮಹೇಶ್ ಭಟ್ ಮಗಳನ್ನು ಮುದ್ದಿಸಿದ್ದಾರಂತೆ!



## 'ಟೈಗರ್ಸ್' ಬಿಡುಗಡೆಗೆ ಸಕಾಲ

'ಮ್ಯಾಗಿ'ಯಲ್ಲಿ ರಾಸಾಯನಿಕವಿದೆ ಎಂದು ವಿವಿಧ ರಾಜ್ಯ ಸರ್ಕಾರಗಳು ನೆಸ್ಲೆ ಕಂಪೆನಿಯ ಈ ಉತ್ಪನ್ನ ಮಾರಾಟ ನಿಷೇಧಿಸುತ್ತಿವೆ. ತಾತ್ಕಾಲಿಕವಾಗಿ ಮ್ಯಾಗಿಯನ್ನು ಮಾರುಕಟ್ಟೆಯಿಂದ ವಾಪಸು ಪಡೆದಿದೆ ನೆಸ್ಲೆ. ಈ ನಡುವೆ 'ಪಟಾ ಪಟ್ ಎಂದು ಮ್ಯಾಗಿ ಸಿದ್ಧಗೊಳಿಸಿ, ಬಾಯಿ ಚಪ್ಪರಿಸಿ' ಎಂದು ಮಕ್ಕಳಾದಿಯಾಗಿ ಎಲ್ಲರ ಜಿಹ್ವೆಯಲ್ಲಿ ನೀರೂರಿಸಲು ಸಾಥ್ ನೀಡಿದ ಪ್ರಚಾರ ರಾಯಭಾರಿಯಗಳಾದ 'ಸ್ಟಾರ್'ಗಳ ಮೇಲೆ ನ್ಯಾಯಾಲಯ ಗರಂ ಆಗಿದೆ. ಈ ಪ್ರಚಾರ ರಾಯಭಾರಿಗಳ ಮೇಲೆ ದೂರು ದಾಖಲಿಸುವ ಕೂಗು ಎದ್ದಿದೆ.

ಅದೇನೆ ಇರಲಿ 'ಮ್ಯಾಗಿ'ಯ ಆಟ–ಮಾಟವನ್ನು ಎನ್‌ಕ್ಯಾಷ್ ಮಾಡಿಕೊಳ್ಳುವ ಸಲಹೆಯನ್ನು ಕಿಸ್ಸರ್ ಬಾಯ್ ಖ್ಯಾತಿಯ ಇಮ್ರಾನ್ ಹಶ್ಮಿ ತಾವು ನಟಿಸುತ್ತಿರುವ 'ಟೈಗರ್ಸ್' ಚಿತ್ರತಂಡಕ್ಕೆ ಹೇಳಿದ್ದಾರೆ. ಹೌದು. ಆಸ್ಕರ್ ಪ್ರಶಸ್ತಿ ಪುರಸ್ಕೃತ ಬೋಸ್ನಿಯಾ ದೇಶದ ಡ್ಯಾನಿಸ್ ಟ್ಯಾನೋವಿಕ್ ನಿರ್ದೇಶಿಸಿರುವ 'ಟೈಗರ್ಸ್'ಅನ್ನು ಭಾರತದಲ್ಲಿ ತೆರೆಗೆ ತರಲು ಇದು ಸಕಾಲ ಎಂದಿದ್ದಾರೆ. 'ಅಂತರರಾಷ್ಟ್ರೀಯ ಆಹಾರ ಸಂಸ್ಥೆಗಳಲ್ಲಿ ನಡೆಯುವ ಕಲಬೆರಕೆ, ಭ್ರಷ್ಟಾಚಾರದ ಬಗ್ಗೆ ಸಿನಿಮಾ ಬೆಳಕು ಚೆಲ್ಲಲಿದೆ. ಚಿತ್ರವನ್ನು ಬಿಡುಗಡೆ ಮಾಡಲು ಇದು ಸೂಕ್ತ ಸಮಯ ಎಂದಿದ್ದಾರೆ' ಹಶ್ಮಿ. ತಾಯಿ ಎದೆಹಾಲಿಗೆ ಪರ್ಯಾಯವಾಗಿ ಮಗುವಿಗೆ ನೀಡುವ ಹಾಲಿನ ಉತ್ಪನ್ನದಲ್ಲಿ ಆರೋಗ್ಯಕ್ಕೆ ಮಾರಕವಾದ ಅಂಶಗಳಿರುವುದು ಮತ್ತು ಅದರ ವಿರುದ್ಧದ ಹೋರಾಟವೇ ಕಥಾ ವಸ್ತು. ಗೀತಾಂಜಲಿ ಥಾಪ, ಡ್ಯಾನಿ ಹಸ್ಸನ್, ಖಾಲಿದ್ ಅಬ್ದುಲ್ಲಾ, ಆದಿಲ್ ಹುಸೇನ್ ಮತ್ತಿತರರು ಈ ಅಂತರರಾಷ್ಟ್ರೀಯ ಸಿನಿಮಾದಲ್ಲಿ ನಟಿಸಿದ್ದಾರೆ.

■ ಡಿ.ಎಂ.ಕೆ